**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ, ಇವರ ನ್ಯಾಯಾಲಯ**

**ಎಸ್.ಸಿ.ನಂ.74/2020**

ಫಿರ್ಯಾದಿದಾರರು:- ಕರ್ನಾಟಕ ಸರ್ಕಾರ

***-:ವಿರುದ್ಧ:-***

ಆರೋಪಿತರು :- ಆಕಾಶ @ ಸಾಗರ ತಂದೆ ಕಿಶನ ಚವ್ಹಾಣ ಮತ್ತು ಇತರರು.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ. 313 ರಡಿ ಆಪಾದಿತನ ಹೆಚ್ಚುವರಿ ಹೇಳಿಕೆ**

=======

ಆಪಾದಿತನ ಹೆಸರು : 2 ರಿಂದ 6 ನೇ ಆರೋಪಿತರು

ಗಂಡ/ತಂದೆಯ ಹೆಸರು : ಕಿಶನ

ವಯಸ್ಸು : 51 ವರ್ಷ

ಉದ್ಯೋಗ : ಮನೆಗೆಲಸ

ವಾಸಸ್ಥಳ : ಎಲ್ಲರೂ ಸಾ: ಹಂಚನಾಳ ತಾಂಡಾ ನಂ.1, ತಾಲೂಕು ಮತ್ತು ಜಿಲ್ಲಾ: ವಿಜಯಪುರ.

=======

ಪ್ರಶ್ನೆ1 : ಅಭಿಯೋಜನಾ ಪರ ವಿಚಾರಣೆಯಾಗಿರುವ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದಿರಾ?

ಉತ್ತರಃ

ಪ್ರಶ್ನೆಃ2. ಫ್ರಾ.ಸಾ.26 ಡಾ: ಪ್ರತಾಪಸಿಂಗ್ ತಂದೆ ಈಶ್ವರ ರಾಠೋಡ, ತಮ್ಮ ಸಾಕ್ಷ್ಯದಲ್ಲಿ, 2014 ರಿಂದ 2017 ರವರೆಗೆ ಅವರು ವಿಜಯಪುರದ ಅಲ್-ಅಮೀನ್ ವೈದ್ಯಕೀಯ

ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವೈದ್ಯಕೀಯ ಶಾಸ್ತ್ರದಲ್ಲಿ (Forensic Medicine) ಸ್ನಾತಕೋತ್ತರ ಪದವಿಯನ್ನು ಪೂರೈಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:3. ಪ್ರಾ.ಸಾ.26 ರವರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ, ಆ ಅವಧಿಯಲ್ಲಿ, ಈ ಪ್ರಕರಣದ ಮೃತ ಚಂದ್ರಶೇಖರ ರವರ ಶವ ಮರಣೋತ್ತರ ಪರೀಕ್ಷೆ ಮಾಡಿದಂತಹ ಡಾ. ರಮೇಶ್ ಸಿ. ಪಾಟೀಲ್ ಅವರು ಸದರಿ ಕಾಲೇಜಿನ **Forensic Science** ವಿಧಿವಿಜ್ಞಾನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:4. ಪ್ರಾ.ಸಾ.26 ರವರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ, ಆ ಸಮಯದಲ್ಲಿ ಅವರಿಗೆ ಡಾ: ರಮೇಶ ಸಿ. ಪಾಟೀಲ ರವರೊಂದಿಗೆ ಕೆಲಸ ಮಾಡುವ ಅವಕಾಶ ಸಿಕಿತ್ತು ಹಾಗೂ ಆ ಕಾರಣ ಅವರಿಗೆ ಡಾ: ರಮೇಶ ಸಿ. ಪಾಟೀಲ ರವರ ಕೈಬರಹ ಮತ್ತು ಸಹಿಯ ಪರಿಚಯವಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ5. ಫ್ರಾ.ಸಾ.26 ರವರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ, ಆದ್ದರಿಂದ ಅವರು ನಿ.ಪಿ.35 ಮತ್ತು ನಿ.ಪಿ.37 ರಲ್ಲಿ ಇರುವ ಡಾ: ರಮೇಶ ಸಿ. ಪಾಟೀಲ ರವರ ಸಹಿಗಳನ್ನು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ6.ಫ್ರಾ.ಸಾ.26 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಕಳೆದ ಎಂಟು ವರ್ಷಗಳಿಂದ ಅವರು ಕೊಲ್ಲಾಪುರದ ಡಿ. ವೈ. ಪಾಟೀಲ್ ವೈದ್ಯಕೀಯ ಕಾಲೇಜಿನ Forensic Medicine ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ7.ಫ್ರಾ.ಸಾ.26 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರ ಜ್ಞಾನ ಮತ್ತು ವೃತ್ತಿಪರ ಅನುಭವದ ಆಧಾರದ ಮೇಲೆ, ಮರಣೋತ್ತರ ಪರೀಕ್ಷಾ ವರದಿಯಲ್ಲಿ ನಮೂದಿಸಲಾದ ಗಾಯಗಳನ್ನು ಪರಿಶೀಲಿಸಿದ ನಂತರ, ಮೃತ ಚಂದ್ರಶೇಖರ ಅವರು ಅನೇಕ ಗಾಯಗಳ ಪರಿಣಾಮವಾಗಿ ಅತಿಯಾದ ರಕ್ತಸ್ರಾವದಿಂದ ಉಂಟಾದ ಆಘಾತದಿಂದ ಮೃತಪಟ್ಟಿದ್ದಾರೆ ಎಂದು ಹೇಳಬಲ್ಲೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆಃ8. ನಿಮ್ಮ ಪರ ಸಾಕ್ಷಿ ಮಾಡಿಸುವುದು ಹಾಗೂ ಏನಾದರೂ ದಾಖಲೆ ಹಾಜರು ಪಡೆಸುವುದು ಇದೆಯಾ ?

ಉತ್ತರಃ

ಪ್ರಶ್ನೆ: 9. ನೀವು ಬೇರೆ ಏನಾದರೂ ಹೇಳುವುದಿದೆಯಾ ?

ಉತ್ತರಃ

(ಈ ಮೇಲ್ಕಾಣಿಸಿದ ಆರೋಪಣೆಯನ್ನು ಆರೋಪಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಮತ್ತು ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸಿದ್ದೇನೆ.)

**Sd/-**

ಸ್ಥಳ : ವಿಜಯಪುರ  
ದಿನಾಂಕಃ 03.08.2026

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,  
ವಿಜಯಪುರ.